104(289) ಶ್ರೀ ಪದ್ಮನಾಭ ಕೊಟ್ಟಾರಿ (ವಿಟ್ಲ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರವನ್ನೊದಗಿಸುವುದು)

ಆ) ಸರ್ಕಾರ ಬೀಡಿ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳೇನು?

ಇ) ಬೀಡಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಅಧ್ಯಯನ ನಡೆಸಲು ಉದ್ದೇಶಿಸಿದೆಯೇ?

ಈ) ಅಧ್ಯಯನ ನೆಡೆಸುತ್ತಿರುವ ಸಂಸ್ಥೆ ಯಾವುದು?

ಉ) ಅಧ್ಯಯನ ವರದಿ ಸರ್ಕಾರಕ್ಕೆ ತಲುಪಿದೆಯೇ?

ಊ) ಹಾಗಿದ್ದಲ್ಲಿ ವರದಿಯಲ್ಲಿನ ಪ್ರಮುಖ ಅಂಶಗಳಾವುವು?

ಎ) ಸರ್ಕಾರ ಇವರಿಗೆ ಕಲ್ಪಿಸಲು ಉದ್ದೇಶಿಸಿರುವ ಸೌಲಭ್ಯಗಳು ಯಾವುವು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ದಿ: 31-10-2004ರ ಅಂತ್ಯಕ್ಕೆ ಬೀಡಿ ಕಾರ್ಮಿಕರ ಸಂಖ್ಯೆ: 2,87,062, ಜಿಲ್ಲಾವಾರು ವಿವರಗಳನ್ನು ಅನುಬಂಧ--ಅ ರಲ್ಲಿ ಲಗತ್ತಿಸಿದೆ(ರಿ)

ಆ) ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಬೀಡಿ ಕಾರ್ಮಿಕರಿಗೆ ಕೆಳಕಂಡ ಯೋಜನೆಗಳು ಜಾರಿಯಲ್ಲಿವೆ.

ಅ) ವಸತಿ, ಆರೋಗ್ಯ, ಶಿಕ್ಷಣ,

ಆ) ಅರ್ಹ ಬೀಡಿ ಕಾರ್ಮಿಕರು ಮೃತಪಟ್ಟರೆ ಅವರ ಇಬ್ಬರು ಹೆಣ್ಣುಮಕ್ಕಳಿಗೆ ತಲಾ ರೂ. 5,000ದಂತೆ ಅವರ ಮದುವೆಗೆ ಧನ ಸಹಾಯ ನೀಡಲಾಗುತ್ತಿದೆ.

ಇ) ಹೌದು

ಈ) ದಿ ಇನ್ಸ್‌ಟಿಟ್ಯೂಟ್ ಆಫ್ ಸೋಷಿಯೋ ಎಕನಾಮಿಕ್ ಚೇಂಜ್, ಬೆಂಗಳೂರು.

ಉ) ಇಲ್ಲ

ಊ) ಉದ್ಭವಿಸುವುದಿಲ್ಲವಿ

ಎ) ಬೀಡಿ ಕಾರ್ಮಿಕರಿಗೆ ಸಕಾಲ ನಿಯಮಿತ ವೇತನ ಮತ್ತು ಕಚ್ಚಾವಸ್ತುಗಳು ಇತ್ಯಾದಿ ವಿಷಯಗಳ ಬಗ್ಗೆ ಸೌಲಭ್ಯಗಳನ್ನು ಕಲ್ಪಿಸಿ ಇವರ ಅಭ್ಯುದಯ ಸಾಧಿಸಲು ಉದ್ದೇಶಿಸಲಾಗಿರುತ್ತದೆ.

ಅನುಬಂಧ-ಅ

ಜಿಲ್ಲಾವಾರು ಬೀಡಿ ಕಾರ್ಮಿಕರ ಸಂಖ್ಯೆ

ಕ್ರ.ಸಂ.	ಜಿಲ್ಲೆ	ಕಾರ್ಮಿಕರ ಸಂಖ್ಯೆ
1	ಬೆಂಗಳೂರು	6,068
2	ಮೈಸೂರು	10,733
3	ಮಂಡ್ಯ	7,313
4	ಶಿವಮೊಗ್ಗ	776
5	ಕೋಲಾರ	3,439
6	ತುಮಕೂರು	8,002

7	ಹಾಸನ	822
8	ಮಂಗಳೂರು	1,95,079
9	ಉಡುಪಿ	37,539
10	ಹುಬ್ಬಳ್ಳಿ	545
11	ಬಳ್ಳಾರಿ	277
12	ದಾವಣಗೆರೆ	5,036
13	ಗುಲ್ಬರ್ಗಾ	458
14	ಬಿಜಾಪುರ	73
15	ಬೆಳಗಾಂ	2,040
16	ಹಾವೇರಿ	1,457
17	ಚಿಕ್ಕಮಗಳೂರು	87
18	ಗದಗ	49
19	ಕೊಪ್ಪಳ	104
20	ಬಾಗಲಕೋಟೆ	452
21	ಚಾಮರಾಜನಗರ	6,713
	ಒಟ್ಟು	2,87,062

105(577) ಶ್ರೀ ಪದ್ಮನಾಭ ಕೊಟ್ಟಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ನಿರ್ವಾಣ ಕೆಲಸ ಕಾರ್ಯಗಳಿಗಾಗಿ 2004–2005ನೇ ಸಾಲಿನಲ್ಲಿ ನಿಗಧಿಮಾಡಿದ್ದ ಹಾಗೂ ಬಿಡುಗಡೆ ಮಾಡಲಾದ ಅನುದಾನದ ಮೊತ್ತ ಎಷ್ಟಬಿ

ಆ) ಬಿಡುಗಡೆ ಮಾಡಲಾದ ಹಣದಲ್ಲಿ ಹಂಚಿಕೆಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ (ಜಿಲ್ಲಾವಾರು ಹಂಚಿಕೆ ವಿವರ ನೀಡುವುದು):

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 2004–05ನೇ ಸಾಲಿನಲ್ಲಿ ಆಯವ್ಯಯದಲ್ಲಿ ಮುಜರಾಯಿ ಇಲಾಖಾ ಯೋಜನೆಯಡಿ ರೂ. 1264.00 ಲಕ್ಷಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತೆ ಇರುತ್ತದೆ:–

1) ಜೀರ್ಣೋದ್ಧಾರ / ರೂ. 2,76.05,000.00 ದುರಸ್ಥಿ/ನವೀಕರಣ ಯೋಜನೆಯಡಿ
2) ಆರಾಧನ ರೂ. 6,31,68,000.00 ಯೋಜನೆ

ಆ) ಆರಾಧನ ಯೋಜನೆಯಡಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 2.82 ಲಕ್ಷಗಳಂತೆ 224 ವಿಧಾನ ಸಭಾ ಕ್ಷೇತ್ರಗಳಿಗೆ ಸಮನಾಗಿ ರೂ. 6,31,68,000.00ಗಳನ್ನು ಹಂಚಿಕೆ ಮಾಡಲಾಗಿದೆ. (ಜಿಲ್ಲಾವಾರು ವಿವರ ಅನುಬಂಧ–1)

ಜೀರ್ಣೋದ್ಧಾರ/ನವೀಕರಣ ಯೋಜನೆಯಡಿ ಧಾರ್ಮಿಕ ಸಂಸ್ಥೆಗಳ ಕೋರಿಕೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ. (ವಿವರ ಅನುಬಂಧ–2)